ಸುದ್ದಿ ಸಿಂಚನ

ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಗೈರು: 8 ಸಹ ಶಿಕ್ಷಕರು ಅಮಾನತು

ಮೈಸೂರು: ಜಿಲ್ಲೆಯಲ್ಲಿ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಸಮೀಕ್ಷೆ ನಡೆಯುತ್ತಿದ್ದು ಸಮೀಕ್ಷಾ ಗಣತಿ ಕಾರ್ಯಕ್ಕೆ ಹಾಜರಾಗದೇ ಅಧಿಕಾರಿಗಳ ದೂರವಾಣಿ ಕರೆಯನ್ನು ಸ್ವೀಕರಿಸದೇ ಬೇಜವಾಬ್ದಾರಿ ಹಾಗೂ ಅತೀವ ನಿರ್ಲಕ್ಷ್ಯ ತೋರಿದ 8 ಸಹ ಶಿಕ್ಷಕರನ್ನು ಜಿಪಂ ಸಿಇಒ ಎಸ್. ಯುಕೇಶ್ ಕುಮಾರ್‌ಅವರ ಆದೇಶದ ಮೇರೆಗೆ ಡಿಡಿಪಿಐ ಎಸ್.ಟಿ. ಜವರೇಗೌಡ ಅವರು ಅಮಾನತುಗೊಳಿಸಿ ಆದೇಶಿಸಿದ್ದಾರೆ. ಮೈಸೂರು ಉತ್ತರ ವಲಯ ಕೆಸರೆ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ರಾಜೇಂದ್ರ ನಗರದ ಜ್ಞಾನಗಂಗಾ ಹಿರಿಯ ಪ್ರಾಥಮಿಕ ಶಾಲೆ, ಜಾಕಿ ಕ್ವಾಟ್ರಸ್ ನ ಆದರ್ಶ ವಿದ್ಯಾಲಯ, ಹುಣಸೂರು ತಾಲೂಕಿನ ಕರಿಗೌಡರ ಬೀದಿಯ ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆ, ದಕ್ಷಿಣ ವಲಯ ಬಿ.ಬಿ. ಗಾರ್ಡ್‌ನ ಶ್ರೀ ಶಾರದಾ ಪ್ರೌಢಶಾಲೆ, ಮರಳಯ್ಯನ ಕೊಪ್ಪಲು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕರಿಮುದ್ದನಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುರುಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕರನ್ನು ಅಮಾನತುಗೊಳಿಸಲಾಗಿದೆ.

ಎಲ್ಲೆಡೆ ನಾದಲಹರಿ, ಗಾನಸುಧೆ, ನೃತ್ಯವೈಭವ..

ಅರಮನೆಯಲ್ಲಿ ವಿಜಯ್ ಪ್ರಕಾಶ್ ಗಾಯನಕ್ಕೆ ಪ್ರೇಕ್ಷಕರು ಜೈಹೋ | ಚಾಮುಂಡೇಶ್ವರಿ ಶಂಕರಿ ಕೀರ್ತನೆಯೊಂದಿಗೆ ಆರಂಭ

• **ಬಿ. ಶೇಖರ್ ಗೋಪಿನಾಥಂ**
ಕನ್ನಡಪ್ರಭ ವಾರ್ತೆ ಮೈಸೂರು

ನಾಡಹಬ್ಬ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾನುವಾರ ನಾದಲಹರಿ, ಗಾನಸುಧೆ, ನೃತ್ಯವೈಭವವು ಪ್ರೇಕ್ಷಕರ ಮನಮೋಹಿಸಿತು.

ಮೈಸೂರು ಅರಮನೆ ಮುಂಭಾಗದ ವೇದಿಕೆಯಲ್ಲಿ ಖ್ಯಾತ ಗಾಯಕ ವಿಜಯ್ ಪ್ರಕಾಶ್ ಮತ್ತು ತಂಡದವರು ಸುಗಮ ಸಂಗೀತ ಕಾರ್ಯಕ್ರಮದ ಮೂಲಕಗಾನಸುಧೆಹರಿಸಿದರು. ಚಾಮುಂಡೇಶ್ವರಿ ಶಂಕರಿ ಕೀರ್ತನೆಯೊಂದಿಗೆ ಹಾಡಲು ಆರಂಭಿಸಿದ ವಿಜಯ್‌ಪ್ರಕಾಶ್‌ಅವರು, ಸಹಗಾಯಕರೊಂದಿಗೆ ಹಬ್ಬ... ಹಬ್ಬ... ಇದು ಕರಡುನಾಡ ಮನೆ ಮನೆ ಹಬ್ಬ... ಹಾಡುವ ಮೂಲಕ ದಸರಾ ಹಬ್ಬಕ್ಕೆ ಮೆರುಗು ಹೆಚ್ಚಿಸಿದರು.

ಬೊಂಬೆ ಹೇಳುತ್ತೈತೆ ಮತ್ತೆ ಹೇಳುತ್ತೈತೆ ನೀನೆ ರಾಜಕುಮಾರ...ಹಾಡಿಗೆ ಪ್ರೇಕ್ಷಕರೆಲ್ಲ ತಮ್ಮ ಮೊಬೈಲ್ ಕ್ಯಾಮರಾ ಟಾರ್ಚ್ ಹೊಲಾಡಿಸಿ ಧ್ವನಿಗೂಡಿಸಿ ಹಾಡಿ ನಟ ಪುನೀತ್ ರಾಜ್ ಕುಮಾರ್‌ಅವರನ್ನು ಸ್ಮರಿಸಿದರು.

ಹಲೋ ಹಲೋ ನನ್ನ ಮನಸ್ಸು ಇಲ್ಲೆ ಎಲ್ಲೋ..., ಒಪನ್ ಹೇರ್‌ಬಿಟ್ಕೊಂಡು ಕೂದಲು ಹಾರಾಡ್‌ಸ್ಕೊಂಡು.., ಸಿಂಗಾರ ಸಿರಿಯೇ.., ಬೆಳಗೆದ್ದು ಯಾರ ಮುಖವ ನಾನು ನೋಡಿದೆ... ಮೊದಲಾದ ಜನಪ್ರಿಯ ಹಾಡುಗಳನ್ನು ಹಾಡಿ ಪ್ರೇಕ್ಷಕರು ಕುಣಿಯುವಂತೆ ಮಾಡಿದರು.

ಪೃಥ್ವಿ ಭಟ್, ಶಾಶ್ವತಿ ಕಶ್ಯಪ್ ಮತ್ತು ಅಖಿಲಾ ಅವರು ಸೂಜುಗಾದ ಸೂಜು ಮಲ್ಲಿಗೆ ಮಾದೇವ ನಿಮ್ಮ ಮಂಡೆ ಮ್ಯಾಲೆ ದುಂಡು ಮಲ್ಲಿಗೆ ಹಾಡನ್ನು ಹಾಡಿ ಪ್ರೇಕ್ಷಕರ ಮನಗೆದ್ದರು. ವಿಜಯ್ ಪ್ರಕಾಶ್ ಅವರು ಓಂ ಶಿವೋಂ ಹಂ.. ಓಂ ನಮಃ ಶಿವಾಯ ಎಂದು ಶಿವನ ಸ್ತುತಿಯನ್ನು ಸ್ವರ ಸಲ್ಲಾಪಗಳ ಮೂಲಕ ಹಾಡಿದರು. ಅಲ್ಲದೆ, ಕುಲದಲ್ಲಿ ಕೀಳ್ಯಾವುದೊ ಹುಚ್ಚಪ್ಪ..., ಜೈಹೋ.. ಜೈಹೋ... ಹಾಡನ್ನು ಹಾಡಿದರು.

ಇದಕ್ಕೂ ಮುನ್ನ ಡಾ. ರಾಗಿಣಿ ತಂಡದ ಭಜನ್ ಸಂಗೀತ, ಎಸ್. ಭುವನೇಶ್ವರಿ ವೆಂಕಟೇಶ್ ತಂಡದ ಸುಗಮ ಸಂಗೀತ, ಭೂಮ್ತಾಯಿ ಬಳಗದ ಪರಿವರ್ತನಾ ಗೀತೆಗಳನ್ನು ಹಾಡಿದರು. ಅಂತಿಮವಾಗಿ ಪದ್ಮಶ್ರೀ ಡಾ. ಪದ್ಮಜಾ ರೆಡ್ಡಿ ತಂಡವು ಪ್ರಸ್ತುತಪಡಿಸಿದ ನವದುರ್ಗಾ- ಕೂಚುಪುಡಿ ನೃತ್ಯವು ನೋಡುಗರನ್ನು ರಂಜಿಸಿತು.

ಭಾನುವಾರ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿಸಾವಿರಾರು ಪ್ರೇಕ್ಷಕರು ನೆರೆದಿದ್ದರು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಿ ಸಂಭ್ರಮಿಸಿದರು.

ವಿವಿಧೆಡೆ ಸಾಂಸ್ಕೃತಿಕ ಸಂಭ್ರಮ: ಜಗನ್ಮೋಹನ ಅರಮನೆಯಲ್ಲಿ ಚಿಟ್ಟಿಮೇಳ, ಭರತನಾಟ್ಯ, ವಚನ ಗಾಯನ, ಸುಗಮ ಸಂಗೀತ, ಕಲಾಮಂದಿರದಲ್ಲಿ ಪೂಜಾ ಕುಣಿತ, ಸಮೂಹ ಭರತನಾಟ್ಯ, ಶಾಸ್ತ್ರೀಯಸಂಗೀತ, ಮಹಾನಾಯಕ ಸಾಮ್ರಾಜ್ ಅಶೋಕ್- ನಾಟಕ, ಕಿರು ರಂಗಮಂದಿರದಲ್ಲಿ ಹರಕೆಯ ಕುರಿ ನಾಟಕ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಮುಪ್ಪು ನಾಟಕ ಮತ್ತು ನಿರಾಕರಣೆ ನಾಟಕ ಪ್ರದರ್ಶನವಾಯಿತು.

ಕುವೆಂಪುನಗರದ ಗಾನಭಾರತಿ ವೇದಿಕೆಯಲ್ಲಿ ಸೋಬಾನೆ ಪದ, ಜಾನಪದ ಗಾಯನ, ಭರತನಾಟ್ಯ, ಸುಗಮ ಸಂಗೀತ, ಜೆಎಲ್ ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತಸಭಾದಲ್ಲಿ ನವದುರ್ಗಿ ಮಹಾತ್ಮೆ ನೃತ್ಯರೂಪಕ, ಜಾನಪದ ಗಾಯನ, ಭರತನಾಟ್ಯ, ಕರ್ನಾಟಕ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತವು ಗಮನ ಸೆಳೆಯಿತು.

ಚಿಕ್ಕಗಡಿಯಾರ ವೇದಿಕೆಯಲ್ಲಿ ಡೊಳ್ಳು ಕುಣಿತ, ಜನಪದ ಗಾಯನ, ತತ್ವಪದ ಗಾಯನ, ರಾಧಾನಾಟ-ಸಣ್ಣಾಟಜರುಗಿತು. ಪುರಭವನದಲ್ಲಿ ರಕ್ತರಾತ್ರಿ- ಪೌರಾಣಿಕ ನಾಟಕ, ಕುರುಕ್ಷೇತ್ರ- ನಾಟಕ ಹಾಗೂ ಕುರುಕ್ಷೇತ್ರ ಪೌರಾಣಿಕ ನಾಟಕವು ಪ್ರೇಕ್ಷಕರನ್ನು ರಂಜಿಸಿತು.

ರಮಾಗೋವಿಂದ ರಂಗಮಂದಿರದಲ್ಲಿ ನಾದಸ್ವರ, ಭರತನಾಟ್ಯ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ನೃತ್ಯರೂಪಕ ಹಾಗೂ ಮಾಯಾ ನಾಟಕ ಪ್ರದರ್ಶನವಾಯಿತು.

ನಭದಲ್ಲಿ ನಕ್ಷತ್ರದಂತೆ ಮಿನುಗಿನದ ಡ್ರೋನ್‌ಗಳು

ಏಕಕಾಲದಲ್ಲಿ 3 ಸಾವಿರ ಡ್ರೋನ್ ಗಳ ಹಾರಾಟ | ಬಣ್ಣ ಬಣ್ಣದ ಕಲಾಕೃತಿಗಳ ಚಿತ್ತಾರ ಸೃಷ್ಟಿ



• **ಬಿ. ಶೇಖರ್ ಗೋಪಿನಾಥಂ**
ಕನ್ನಡಪ್ರಭ ವಾರ್ತೆ ಮೈಸೂರು

ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಭಾನುವಾರ ರಾತ್ರಿ ಏಕಕಾಲದಲ್ಲಿ ಆಕಾಶಕ್ಕೆ ಹಾರಿದ 3 ಸಾವಿರ ಡ್ರೋನ್ ಗಳು ನಕ್ಷತ್ರದಂತೆ ಮಿನ ಮಿನುಗುತ್ತಾ ವಿವಿಧ ಕಲಾಕೃತಿಗಳನ್ನು ಸೃಷ್ಟಿಸಿದವು. ನಭದಲ್ಲಿ ಡ್ರೋನ್ ಗಳ ವೈವಿಧ್ಯಮಯ ಪ್ರದರ್ಶನವು ನೆರೆದಿದ್ದ ಸಾವಿರಾರು ಜನರ ಕಣ್ಣಿಗೆ ಬೆಳಕಿನ ಅದ್ಭುತ ಲೋಕವನ್ನು ಕಟ್ಟಿಕೊಟ್ಟವು.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತವು (ಸೆಸ್ಕ್) ವತಿಯಿಂದ ದಸರಾ ಮಹೋತ್ಸವದ ಅಂಗವಾಗಿ ನಗರದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಆಯೋಜಿಸಿದ್ದ ರೋಮಾಂಚಕಾರಿ ಡ್ರೋನ್ ಪ್ರದರ್ಶನವು ಜನರ ಕಣ್ಮನ ಸೆಳೆಯಿತು. ಆಕಾಶದಲ್ಲಿ ಡ್ರೋನ್ ಗಳು ಮೂಡಿಸಿದ ಚಿತ್ತಾರವು ನೋಡುಗರನ್ನು ತುದಿಗಾಲಿನಲ್ಲಿ ನಿಲ್ಲುವಂತೆ ಮಾಡಿತು.



ಚಿತ್ರಗಳು- ಅನುರಾಗ್ ಬಸವರಾಜ್

ಕಳೆದ ವರ್ಷ ನಡೆದ ಡ್ರೋನ್ ಪ್ರದರ್ಶನದಲ್ಲಿ 1500 ಡ್ರೋನ್ ಗಳ ಮೂಲಕ ಆಕರ್ಷಕ ಪ್ರದರ್ಶನವನ್ನು ನೀಡಲಾಗಿತ್ತು. ಆದರೆ, ಈ ಬಾರಿಯ ಪ್ರದರ್ಶನವನ್ನು ಮತ್ತಷ್ಟು ಆಕರ್ಷಣೀಯವಾಗಿಸುವ ಸಲುವಾಗಿ ಒಟ್ಟು 3000 ಡ್ರೋನ್ ಬಳಸಿಕೊಂಡು ನಡೆಸಲಾದ ಡ್ರೋನ್ ಪ್ರದರ್ಶನ ಪ್ರೇಕ್ಷಕರನ್ನು ರಂಜಿಸಿತು.

ಸೌರಮಂಡಲ, ವಿಶ್ವಭೂಪಟ, ದೇಶದ ಹೆಮ್ಮೆಯ ಸೈನಿಕ, ನವಿಲು, ರಾಷ್ಟ್ರೀಯ ಪ್ರಾಣಿ ಹುಲಿ, ಡಾಲ್ಫಿನ್, ಈಗಲ್, ಸರ್ಪದ ಮೇಲೆ ಶ್ರೀಕೃಷ್ಣ ನೃತ್ಯ ಮಾಡುವುದು, ಕಾವೇರಿ ಮಾತೆ, ಲಕ್ಷ್ಮಿ ್ರೀ, ಕರ್ನಾಟಕ ಭೂಪಟದೊಂದಿಗೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್, ಪಂಚ ಗ್ಯಾರಂಟಿ ಯೋಜನೆಗಳಿಂದ ಕೂಡಿದ್ದ ಕರ್ನಾಟಕ ಭೂಪಟ, ಅಂಬಾರಿ ಆನೆ, ನಾಡದೇವತೆ ಚಾಮುಂಡೇಶ್ವರಿ ಕಲಾಕೃತಿಗಳು ನೋಡುಗರಿಗೆ ಅದ್ಭುತ ಮನರಂಜನೆ ನೀಡಿದವು. ಡ್ರೋನ್ ಪ್ರದರ್ಶನದ ಆಕರ್ಷಣೆ ಕಣ್ತುಂಬಿಕೊಳ್ಳಲು ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಜನರು ಕಿಕ್ಕಿರಿದು ತುಂಬಿದ್ದರು.

ಕುನಾಲ್ ಗಾನಯಾನ

ಡ್ರೋನ್ ಪ್ರದರ್ಶನ ಆರಂಭಕ್ಕೂ ಮುನ್ನ ಖ್ಯಾತ ಹಿನ್ನಲೆ ಗಾಯಕ ಕುನಾಲ್ ಗಾಂಜಾವಾಲ ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಿತು. ವೇದಿಕೆಗೆ ಬರುತ್ತಿದ್ದಂತೆ ಮೊದಲಿಗೆ ಪುನೀತ್ ರಾಜ್ ಕುಮಾರ್‌ಅಭಿನಯದ ನೀನೆ... ನೀನೆ.. ಗೀತೆಯನ್ನು ಹಾಡಿ ರಂಜಿಸಿದ ಕುನಾಲ್ ಗಾಂಜಾವಾಲ, ಆ ನಂತರದಲ್ಲಿ ಖುಷಿಯಾಗಿದೆ ಏಕೋ ನಿನ್ನಿಂದಲೆ, ಒಂದೇ ಒಂದು ಸಾರಿ ಕಣ್ಮುಂದೆ ಬಾರೆ..., ನಿನ್ನ ಕಂಡ ಕ್ಷಣದಿಂದ..., ಹುಡುಗಿ ಹುಡುಗಿ ನಿನ್ನ ಕಂಡಾಗ, ಕಿವಿ ಮಾತೊಂದು ಹೇಳಲೆ ನಾನಿಂದು... ಸೇರಿದಂತೆ ಕನ್ನಡ ಮತ್ತು ಹಿಂದಿ ಗೀತೆಗಳನ್ನು ಹಾಡಿ ಪ್ರೇಕ್ಷಕರು ಕುಣಿಯುವಂತೆ ಮಾಡಿದರು.

ಇದಕ್ಕೂ ಮುನ್ನ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರು ಡ್ರೋನ್ ಪ್ರದರ್ಶನಕ್ಕೆ ಚಾಲನೆ ನೀಡಿದರು. ಶಾಸಕರಾದ ತನ್ವೀರ್‌ಸೇಠ್, ಕೆ. ಶಿವಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪಿ. ಶಿವರಾಜ್, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು, ತಾಂತ್ರಿಕವಿಭಾಗದ ನಿರ್ದೇಶಕ ಡಿ.ಜೆ. ದಿವಾಕರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್‌ಆಸೀಫ್, ಎಂಡಿಎ ಆಯುಕ್ತ ಕೆ.ಆರ್. ರಕ್ಷಿತ್, ಎಸ್ಪಿ ವಿಷ್ಣುವರ್ಧನ್, ಸೆಸ್ಕ್ ಅಧೀಕ್ಷಕ ಇಂಜಿನಿಯರ್‌ಸುನೀಲ್, ದಸರಾ ದೀಪಾಲಂಕಾರ ಉಪ ಸಮಿತಿ ಅಧ್ಯಕ್ಷ ರಾಘವೇಂದ್ರ ಮೊದಲಾದವರು ಇದ್ದರು.

ಉತ್ತರ ಕನ್ನಡದ ಮಂಜುನಾಥ್ ಈ ಬಾರಿಯ ದಸರಾ ಕೇಸರಿ

• **ಮಹೇಂದ್ರ ದೇವನೂರು**
• **ಕನ್ನಡಪ್ರಭ ವಾರ್ತೆ** ಮೈಸೂರು

ನಾಡಹಬ್ಬ ದಸರಾ ಮಹೋತ್ಸವ ಅಂಗವಾಗಿ ನಡೆದ ಕುಸ್ತಿ ಪಂದ್ಯಾವಳಿಯ ಅಂತಿಮ ದಿನವಾದ ಭಾನುವಾರ ವಾಯಿಂಟ್ ಕುಸ್ತಿಯಲ್ಲಿ ದಸರಾ ಕೇಸರಿ ಪ್ರಶಸ್ತಿಯನ್ನು ಉತ್ತರ ಕನ್ನಡದ ಮಂಜುನಾಥ ತಮ್ಮದಾಗಿಸಿಕೊಂಡರು.

ನಗರದ ಡಿ. ದೇವರಾಜ ಅರಸು ವಿವಿದ್ದೋದೇಶ ಕ್ರೀಡಾಂಗಣದಲ್ಲಿ ನಡೆದ ಕುಸ್ತಿ ಪಂದ್ಯಾವಳಿಯ 74 ರಿಂದ 86 ಕೆಜಿ ವಿಭಾಗದಲ್ಲಿ ಬೆಳಗಾವಿಯ ಪರಮಾನಂದ ಅವರನ್ನು 2 ಅಂಕಗಳ ಅಂತರದಲ್ಲಿ ಮಂಜುನಾಥ್ ಅವರು ಸೋಲಿಸಿದರು. ಅವರಿಗೆ 12,500 ರೂ. ಮೌಲ್ಯ ಒಂದು ಕೆಜಿ ತೂಕದ ಬೆಳ್ಳಿ ಗದೆ ನೀಡಲಾಯಿತು.

57 ರಿಂದ 65 ಕೆಜಿ ಇರುವವರಿಗೆ ಆಯೋಜಿಸಿದ್ದ ದಸರಾ ಕಿಶೋರ ಪ್ರಶಸ್ತಿಗೆ ನಡೆದ ಕುಸ್ತಿಯಲ್ಲಿ ದಾವಣಗೆರೆಯ ಸಂಜೀವ ಕೋರವರ ಜಯಗಳಿಸಿದರು. ಅವರಿಗೆ 10 ಸಾವಿರ ರೂ. ಮೌಲ್ಯದ ಅರ್ಧ ಕೆಜಿ ತೂಕದ ಬೆಳ್ಳಿ ಗದೆ ನೀಡಲಾಯಿತು.

57 ರಿಂದ 76 ಕೆಜಿ ವಿಭಾಗದ ದಸರಾ ಕಿಶೋರಿ ಪ್ರಶಸ್ತಿಗೆ ನಡೆದ ಪಂದ್ಯಾವಳಿಯಲ್ಲಿ ಬೆಳಗಾವಿ ಸ್ವಾತಿ ಪಾಟೀಲ್‌ಅವರು6 ಅಂಕಗಳೊಂದಿಗೆ ಜಯಗಳಿಸಿದರು. ಅವರಿಗೆ 10 ಸಾವಿರ ರೂ. ಮೌಲ್ಯದ ಅರ್ಧ ಕೆಜಿ ಬೆಳ್ಳಿ ಗದೆ ನೀಡಲಾಯಿತು.

86 ಕೆಜಿ ಮೇಲ್ಪಟ್ಟವರಿಗಾಗಿ ನಡೆದ ಮೈಸೂರು ದಸರಾ ಕುಮಾರ ಪ್ರಶಸ್ತಿಯ ಕುಸ್ತಿ ಪಂದ್ಯಾವಳಿಯಲ್ಲಿ ಸುಮಾರು 30 ನಿಮಿಷ ಅಖಾಡದಲ್ಲಿ ಕಾದಾಡಿದ ಮೈಸೂರು ವಿವಿ ಚೇತನ್ ಅಂತಿಮವಾಗಿ ಎದುರಾಳಿ ಚೇತನ್ ಗೆ ಸೋಲೊಪ್ಪಿಕೊಂಡರು. 22 ಅಂಕಗಳೊಂದಿಗೆ ಚೇತನ್ ಜಯಗಳಿಸಿದರು. ಅವರಿಗೆ 10 ಸಾವಿರ ರೂ. ಮೌಲ್ಯದ ಮುಕ್ಕಾಲು ಕೆಜಿ ತೂಕದ ಬೆಳ್ಳಿ ಗದೆಯನ್ನು ನೀಡಲಾಯಿತು.

15 ವರ್ಷದೊಳಗಿನವರ 38 ಕೆಜಿಯ ಬಾಲಕರ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ದಾವಣಗೆರೆಯ ಆರ್. ಪ್ರಜ್ವಲ್ ಜಯಗಳಿಸಿ ದಸರಾ ಬಾಲ ಕಿಶೋರ ಪ್ರಶಸ್ತಿಗೆ ಭಾಜನರಾದರು. ಅವರಿಗೆ ಪ್ರಥಮ ಬಹುಮಾನವಾಗಿ 2500 ರೂ. ನಗದು ನೀಡಲಾಯಿತು.

52 ರಿಂದ 57 ಕೆಜಿಯ ದಸರಾ ಬಾಲಕುಮಾರ್ ಪ್ರಶಸ್ತಿಗೆ ನಡೆದ ಕುಸ್ತಿಯಲ್ಲಿ ಧಾರವಾಡದ ಚೇತನ್ ಜಯಗಳಿಸಿದರು. 17 ವರ್ಷದೊಳಗಿನವರ ವಿಭಾಗದ ದಸರಾ ಬಾಲ ಕೇಸರಿ ಪ್ರಶಸ್ತಿಯ ಕುಸ್ತಿ ಪಂದ್ಯಾವಳಿಯಲ್ಲಿ ದಾವಣಗೆರೆಯ ಅರ್ಜುನ್ ಕೊರವರ ಜಯಗಳಿಸಿದರು. ಇವರಿಗೆ 3 ಸಾವಿರ ರೂ. ನಗದು ಬಹುಮಾನ ನೀಡಲಾಯಿತು.

ದಸರಾ ಬಾಲ ಕಂಠೀರವ ಪ್ರಶಸ್ತಿಯನ್ನು ಹನುಮಂತ ಬೇಲಿನ ಮಟ್ಟಿ ತಮ್ಮದಾಗಿಸಿಕೊಂಡರು. 17 ವರ್ಷ ಮೇಲ್ಪಟ್ಟವರ ಬಾಲ ಕಿಶೋರಿ ಸ್ಪರ್ಧೆಯಲ್ಲಿ ಬನ್ನೂರಿನ ಜಾಹ್ನವಿ ಜಯಗಳಿಸಿದರು. ಅವರಿಗೆ ಪ್ರಥಮ ಬಹುಮಾನವಾಗಿ 2500 ರೂ. ನಗದು ನೀಡಲಾಯಿತು.

ದಸರಾ ಕಂಠೀರವ ಪ್ರಶಸ್ತಿಯನ್ನು ಬೆಳಗಾವಿಯ ಕಾಮೇಶ್ ಪಾಟೀಲ್ ಮುಡಿಗೇರಿಸಿಕೊಂಡರು. 86 ವರ್ಷ ಮೇಲ್ಪಟ್ಟವರ ಈ ಕುಸ್ತಿ ಪಂದ್ಯಾವಳಿಯಲ್ಲಿ ವಿಜೇತರಿಗೆ 15 ಸಾವಿರ ರೂ. ಮೌಲ್ಯದ ಸುಮಾರು ಒಂದು ಕಾಲು ಕೆಜಿ ತೂಕದ ಬೆಳ್ಳಿ ಗದೆಯನ್ನು ಬಹುಮಾನವಾಗಿ ನೀಡಲಾಯಿತು.

ಬಹಿರಂಗ ಹರಾಜು

ಮೆ. ಶುಭಂ ಬ್ಯಾಂಕರ್ಸ್, ಗಿರವಿದಾರರು, ಬಸ್ ನಿಲ್ದಾಣದ ಹತ್ತಿರ, ಕೆ.ಕೆ.ರಸ್ತೆ, ಯಳಂದೂರು 571 441, ಚಾಮರಾಜನಗರ ಜಿಲ್ಲೆ, ಇವರಲ್ಲಿ 1-12-23 ರಿಂದ 17-2-24 ರವರೆಗೆ ಗಿರವಿ ಇಟ್ಟು ಬಿಡಿಸದ ಪದಾರ್ಥಗಳನ್ನು ಕರ್ನಾಟಕ ಗಿರವಿ ಕಾನೂನು 1966ರ ಅಧಿ ನಿಯಮ 20ರನ್ವಯ ದಿನಾಂಕ: 9-10-2025 ರಂದು ಬೆಳಗ್ಗೆ 10 ಗಂಟೆಯಿಂದ ಮೇಲ್ಕಂಡ ಗಿರವಿ ಅಂಗಡಿಯಲ್ಲಿ ಮೆ. ದೀಪಕ್ ಆಕ್ಷನೀಯರ್ಸ್, ಸರ್ಕಾರಿ ಅಂಗೀಕೃತ ಹರಾಜು ದಾರರು, 2007/1, ಸೀಬಯ್ಯ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು-570 001 ರವರು ಹರಾಜು ಮಾಡುವರು.

BEFORE THE HON'BLE I ADDITIONAL SENIOR CIVIL JUDGE AND CJM AT MYSURU

O.S. No.915/2015

Plaintiff : Sri. A.Narayana @ Lingaraju **Dead By LR's**
1(a) Smt.Puttathayamma W/o Late. A.Narayana @ Lingaraju **DEAD**
1(b) Sri. Santhosh S/o Late A.Narayana @ Lingaraju A Aged about 28 years
Both are residing at Dadadahalli Village,Jayapura Hobli, Mysuru Taluk.
1(c) Smt. Thulasi W/o Naga Aged about 30 years R/at Maraluru Chikkaiahanachattra Hobli Nanjangud Taluk, Mysuru District

Vs

Defendants : A.Linganna & others
1 (f) Smt. Uma D/o Late A. Linganna @ A.Dodda Linge gowda Aged about 32 years R/at Kempesiddana Hundi, Nanjangudu Taluk, Mysuru District
1(h) Smt. Manjula D/o Late A. Linganna @ A.Dodda Linge gowda Aged about 29 years R/at Kempesiddana Hundi, Nanjangudu Taluk, Mysuru District

NOTICE

Take note that the above named Plaintiff has filed the above suit under Order VII Rule 1 read with Section 26 of CPC, 1908 against Sri A. Linganna @ A Dodda Linge Gowda among others for the relief of partition and separate possession and is now seeking to bring on record, as legal representatives of the afore-named A.Linganna @ A Dodda Linga Gowda, the above named Defendants No.1 (f) and (h).

The aforesaid Defendants No. 1 (f) and (h) are to appear in person or through her counsel on 29.10.2025 at 11.00 AM before the aforesaid court and take part in the court proceedings. Otherwise, the matter will be heard and decided in her absence in accordance with law.

Given under my hand and seal of the court on this the 27th day of September 2025

By Order of the Court
Sd/- Chief Ministerial Officer
Court of Senior Civil Judge and CJM., Mysuru

ADVOCATE FOR THE PLAINTIFF
A.V. Jayarama Rao
Advocate
No.1230/A, CH-36/A,
2nd Cross, Krishna Murthy Puram
Chamaraja Mohalla,
Mysuru - 570 004

VISTAAR FINANCE
ವಿಸ್ತಾರ್ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
ನೋಂದಾಯಿತ ಕಛೇರಿ: ಪ್ಲಾಟ್ ಸಂ.59 & 60-23, 22ನೇ ಕ್ರಾಸ್, 29ನೇ ಮೈನ್ ಬಿಟಿಎಂ ಬಡಾವಣೆ 2ನೇ ಹಂತ, ಬೆಂಗಳೂರು-560076. www.vistaarfinance.com

ಡಿಮಾಂಡ್ ನೋಟೀಸ್
2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯಡಿ ಕಲಂ 13(2)ರಡಿ ನೋಟೀಸ್

ಕೆಳಕಂಡ ಸಾಲಗಾರರಿಗೆ ವಿಸ್ತಾರ್ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ವಿಎಫ್‌ಎಸ್‌ಪಿಎಲ್) ನೋಟೀಸ್ ನೀಡುವುದೇನೆಂದರೆ, ಅವರುಗಳು ವಿಸ್ತಾರ್ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನಿಂದ ಆಸ್ತಿಗಳ ಮೇಲೆ ಸಾಲವನ್ನು ಪಡೆದುಕೊಂಡಿದ್ದು, ಅವರು ಪಡೆದ ಸಾಲದ ಈಕ್ವೆಟೆಡ್ ಮಂತ್ಲಿ ಇನ್‌ಸ್ಟಾಲ್‌ಮೆಂಟ್ (ಇಎಂಐಎಸ್)ಗಳನ್ನು ಮರು ಪಾವತಿ ಮಾಡುವುದರಲ್ಲಿ ವಿಫಲರಾಗಿರುತ್ತಾರೆ. ಹೀಗಾಗಿ, ಸಾಲದ ಖಾತೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ಮಾರ್ಗದರ್ಶನದಂತೆ ನಿಷ್ಕಾರ್ಯ ಆಸ್ತಿ ಎಂಬುದಾಗಿ ವರ್ಗೀಕರಿಸಲಾಗಿದೆ. ಸಾಲಗಾರರು, ತಾವು ಪಡೆದಿರುವ ಸಾಲದ ಕಡೆಗೆ ಸ್ಥಿರ ಆಸ್ತಿಗಳನ್ನು ಭದ್ರತೆಯಾಗಿ ನೀಡಿರುತ್ತಾರೆ. ಅವುಗಳ ವಿವರಣೆಗಳು ಕೆಳಕಂಡಂತಿವೆ. ಸಾಲಗಾರರು ವಿಸ್ತಾರ್ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ಗೆ ಈ ದಿನಾಂಕದಂದು ಇದ್ದಂತೆ, ಪಾವತಿ ಮಾಡಬೇಕಾದ ಬಾಕಿ ಮೊತ್ತವನ್ನು ಕೆಳಕಂಡಂತೆ ತಿಳಿಸಲಾಗಿದೆ. ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ವಿಶೇಷವಾಗಿ ಈ ಮೂಲಕ ಮಾಹಿತಿ ನೀಡುವುದೇನೆಂದರೆ, ಕೆಳಸಹಿದಾರರು ಸೆಕ್ಯೂರ್ಡ್ ಕ್ರೆಡಿಟರ್ ಆದ, ವಿಸ್ತಾರ್ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಕೆಳಕಂಡ ಸಾಲಗಾರರ ವಿರುದ್ಧ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ (ಸರ್ಫೇಸಿ ಕಾಯಿದೆಯಂತೆ) ಕ್ರಮ ಕೈಗೊಳ್ಳಲು ಆರಂಭಿಸಿದ್ದಾರೆ. ಸಾಲಗಾರರ ಹೆಸರಿನ ಎದುರಾಗಿ ನಮೂದಿಸಿರುವ ಬಾಕಿ ಸಾಲವನ್ನು ಈ ನೋಟೀಸಿನ 60 (ಅರವತ್ತು) ದಿನಗಳ ಒಳಗಾಗಿ ಅಸಲು ಜೊತೆಗೆ ತದನಂತರದ ಬಡ್ಡಿ, ಏನಾದರೂ ಛಾರ್ಜುಗಳಿದ್ದರೆ ಅವು ಸೇರಿದಂತೆ ಪಾವತಿ ಮಾಡಬೇಕು. ಇಲ್ಲವಾದಲ್ಲಿ ಕೆಳಸಹಿದಾರರು ಸೆಕ್ಯೂರ್ಡ್ ಕ್ರೆಡಿಟರ್‌ರವರಿಗೆ ಪ್ರದತ್ತವಾದ ಒಂದು ಅಥವಾ ಹೆಚ್ಚಿನ ಅಧಿಕಾರವನ್ನು ಚಲಾಯಿಸಿ ಸರ್ಫೇಸಿ ಕಾಯಿದೆಯ ಸೆಕ್ಷನ್ 13 ಉಪ-ಬಂಧ (4) ರಂತೆ ಭದ್ರತಾ ಆಸ್ತಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಸೇರಿದಂತೆ ಮಾರಾಟವನ್ನು ಸಹ ಮಾಡುತ್ತಾರೆ. ಕೆಳಗೆ ವಿವರಿಸಲಾದ ಆಸ್ತಿಗಳ ಜೊತೆ ಸಾರ್ವಜನಿಕರು ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ಎಚ್ಚರಿಸಿ ಸಲಹೆ ನೀಡಲಾಗಿದೆ.

ಖಾತಾ ಸಂ.	ಸಾಲಗಾರರು ಮತ್ತು ಸಹ-ಸಾಲಗಾರರ ಹೆಸರು	ಒಟ್ಟು ಬಾಕಿ ಸಾಲದ ಮೊತ್ತ (ರೂ.ಗಳಲ್ಲಿ)	ಒಟ್ಟು ಬಾಕಿ ಸಾಲದ ಮೊತ್ತ ದಿನಾಂಕದಂದು ಇದ್ದಂತೆ
0084SB ML01987	1. ಶ್ರೀ /ಶ್ರೀಮತಿ ಸೈಯದ್ ಇಬ್ರಾಹಿಂ ಟಿವಿ 2. ಶ್ರೀ /ಶ್ರೀಮತಿ ಅಬ್ದುಲ್ ಖಾದರ್ ಟಿವಿಸ್ 3. ಶ್ರೀ /ಶ್ರೀಮತಿ ಅಶ್ರಫ್‌ಉನ್ನೀಸಾ ಟಿಎಂ	ರೂ. 50,50,095/-	08-09-2025

ಭದ್ರತಾ ಆಸ್ತಿಯ ವಿವರಣೆ 1: ಸಕಲ ಸಮಸ್ತವೂ ಸೇರಿದಂತೆ, ಮನೆಯ ಸಂ.150, ಪೂರ್ವ-ಪಶ್ಚಿಮ 10.85 ಮೀ, ಮತ್ತು ಉತ್ತರದಿಂದ ದಕ್ಷಿಣಕ್ಕೆ 20.85 ಮೀ. ದಿ ಮೈಸೂರು ಪೋಸ್ಟಲ್ ಎಂಪ್ಲಾಯೀಸ್ ಕೋ- ಆಪರೇಟೀವ್ ಸೊಸೈಟಿ ಲಿ., ಮೈಸೂರು ಇವರಿಂದ ರೂಪುಗೊಂಡಿರುವ ಭೂಮಿ ಎಲ್‌ಎಕ್ಯು-3 ಸಿಆರ್- 63/92-93, ದಿನಾಂಕ 11.02.1998, ಸರ್ವೆ ಸಂ. 184,185, 189, ದೇವನೂರು ಗ್ರಾಮ, ಮತ್ತು ಸರ್ವೆ ಸಂ. 442, ಕೆಸರೆ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು, ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಮುಡಾ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಆಸ್ತಿ ಸಂ. 151, ದಕ್ಷಿಣಕ್ಕೆ: ಮುಡಾ ಆಸ್ತಿ.

ದಿನಾಂಕ: 29.09.2025
ಸ್ಥಳ: ಮೈಸೂರು
ಅಧಿಕೃತ ಅಧಿಕಾರಿ
ವಿಸ್ತಾರ್ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್

Godrej Finance Limited
Godrej | FINANCE A Godrej Capital Company

ಸಾರ್ವಜನಿಕ ಪ್ರಕಟಣೆ

ಭಾರತೀಯ ರಿಸರ್ವ್ ಬ್ಯಾಂಕ್ (ಬ್ಯಾಂಕೇತರ ಹಣಕಾಸು ಕಂಪನಿ – ಪ್ರಮಾಣ ಆಧಾರಿತ ನಿಯಂತ್ರಕ) ನಿರ್ದೇಶನಗಳು, 2023 ರ ಪರಿಚ್ಛೇದ 43 ರ ನಿಯಮಗಳ ಪ್ರಕಾರ 'ಗೋದ್ರೇಜ್ ಫೈನಾನ್ಸ್ ಲಿಮಿಟೆಡ್' ನಿಂದ ಸಾರ್ವಜನಿಕ ಪ್ರಕಟಣೆ

ಗೋದ್ರೇಜ್ ಫೈನಾನ್ಸ್ ಲಿಮಿಟೆಡ್ ("ಕಂಪನಿ" ಅಥವಾ "GFL") ಕಂಪನಿಗಳ ಕಾಯಿದೆ, 1956 ರ ಅಡಿಯಲ್ಲಿ ಸ್ಥಾಪಿಸಲಾದ ಒಂದು ಪಬ್ಲಿಕ್ ಲಿಮಿಟೆಡ್ ಕಂಪನಿಯಾಗಿದೆ (ಕಾರ್ಪೊರೇಟ್ ಐಡೆಂಟಿಫಿಕೇಷನ್ ನಂಬರ್: U67120MH1992PLC065457). ಇದು ಠೇವಣಿ ಪಡೆಯದ ಬ್ಯಾಂಕೇತರ ಹಣಕಾಸು ಸಂಸ್ಥೆ ("NBFC") ಆಗಿದ್ದು ಭಾರತೀಯ ರಿಸರ್ವ್ ಬ್ಯಾಂಕ್‌ನೊಂದಿಗೆ ನೋಂದಾಯಿಸಲ್ಪಟ್ಟಿದೆ (COR. No: 13.00368). GFL ನ ನೋಂದಾಯಿತ ಕಚೇರಿಯ ವಿಳಾಸ, ಗೋದ್ರೇಜ್ ಒನ್, ಪಿರೋಜ್‌ಷಾನಗರ್, ಈಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ, ವಿಕ್ರೋಲಿ (ಪೂ), ಮುಂಬೈ - 400079, ಮಹಾರಾಷ್ಟ್ರ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಕಾರ್ಯಾಚರಣೆಯ ಕಾರಣಗಳಿಗಾಗಿ, ಕಂಪನಿಯು ತನ್ನ ಶಾಖಾ ಕಚೇರಿಯನ್ನು, ವಿಕ್ರಿಯೇಟ್ ಸ್ಪೇಸ್ #658, 3ನೇ ಮಹಡಿ, ವಿಶ್ವಮಾನವ ಡಬಲ್ ರೋಡ್, ಸರಸ್ವತಿಪುರಂ, ಮೈಸೂರು – 570009, ಕರ್ನಾಟಕ ಇಲ್ಲಿಂದ, 2918, 2ನೇ ಮಹಡಿ, ಪಟೇಲ್ ಮ್ಯಾನ್ಷನ್, CH-15-1B, ಕಾಂತರಾಜ್ ಅರಸ್ ರಸ್ತೆ, ಸರಸ್ವತಿಪುರಂ, ಮೈಸೂರು – 570009, ಕರ್ನಾಟಕ ಇಲ್ಲಿಗೆ, ಈ ಪ್ರಕಟಣೆ ನೀಡಲಾದ ದಿನಾಂಕದಿಂದ 3 ತಿಂಗಳೊಳಗೆ ಸ್ಥಳಾಂತರಗೊಳ್ಳಲಿದೆ.

ಏನೇ ಪ್ರಶ್ನೆಗಳಿದ್ದರೂ ಗ್ರಾಹಕರು customer@godrejcapital.com ಇಮೇಲ್ ಮೂಲಕ ಸಂಪರ್ಕಿಸಬಹುದು.

ಈ ಸಂಬಂಧ ಯಾವುದೇ ಸ್ಪಷ್ಟೀಕರಣ ಅಥವಾ ವಿಚಾರಣೆಗಳಿದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 (ಮೂವತ್ತು) ದಿನಗಳೊಳಗೆ ಕಂಪನಿಯ ನೋಂದಾಯಿತ ಕಚೇರಿಯ, ಮುಖ್ಯ ಅನುಸರಣಾ ಅಧಿಕಾರಿ, ಶ್ರೀ ಯೋಗೇಶ್ ಜೈನ್ ಅವರಿಗೆ ಅಥವಾ gfl.compliance@godrejfinance.com ಗೆ ಕಳುಹಿಸಬಹುದು.

ಸಹಿ/-
ಗೋದ್ರೇಜ್ ಫೈನಾನ್ಸ್ ಲಿಮಿಟೆಡ್ ಪರವಾಗಿ

ಸ್ಥಳ: ಮುಂಬೈ
ದಿನಾಂಕ: 29-09-25

SBFC
ಎಸ್‌ಬಿಎಫ್‌ಸಿ ಫೈನಾನ್ಸ್ ಲಿಮಿಟೆಡ್
ನೋಂದಾಯಿತ ಕಛೇರಿ: ಯುನಿಟ್ ಸಂ. 103, ಮೊದಲನೇ ಮಹಡಿ, ಸಿ ಅಂಡ್ ಬಿ ಸ್ಕ್ವಯರ್, ಸಂಗಮ್ ಕಾಂಪ್ಲೆಕ್ಸ್, ಗ್ರಾಮ ಚಾಕಲ, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ (ಪೂರ್ವ) ಮುಂಬೈ-400059

ಡಿಮಾಂಡ್ ನೋಟೀಸ್

ಆದಾಗ್ಯೂ, ಸಾಲಗಾರರು/ಸಹ-ಸಾಲಗಾರರು ಅಂದರೆ ಕಾಲಕಾಲಕ್ಕೆ ಪಾವತಿ ಮಾಡಬೇಕಾದ ದಿನಾಂಕದ ಅಸಲು, ಬಡ್ಡಿ ಸೇರಿದ ಮೊತ್ತವನ್ನು ಎಸ್‌ಬಿಎಫ್‌ಸಿ ಫೈನಾನ್ಸ್ ಲಿಮಿಟೆಡ್‌ನಿಂದ ಹಣಕಾಸಿನ ನೆರವು ಪಡೆದಿದ್ದು, ಬಾಕಿಯಾಗಿರುವ ಸಾಲದ ಮೊತ್ತವನ್ನು ಸಾಲಗಾರರು/ಜಾಮೀನುದಾರರು ಮರು ಪಾವತಿ ಮಾಡಲು ವಿಫಲರಾಗಿದ್ದು, ಅವರುಗಳಿಂದ ವಸೂಲು ಮಾಡಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಮಾರ್ಗದರ್ಶನಗಳಂತೆ ಎಸ್‌ಬಿಎಫ್‌ಸಿ ಲೆಕ್ಕ ಪುಸ್ತಕದ ನಿಮ್ಮ ಖಾತೆಯನ್ನು ಅಧಿಕೃತ ಅಧಿಕಾರಿಯವರು ವಿತರಿಸಿರುವ ಆಸ್ತಿ ವರ್ಗೀಕರಣಕ್ಕಾಗಿನ ನಿರ್ದೇಶನದಂತೆ ನಿಷ್ಕಾರ್ಯ ಆಸ್ತಿ ಎಂಬುದಾಗಿ ವರ್ಗೀಕರಿಸಲಾಗಿದೆ. ತದನಂತರ 2002ರ (''ಸರ್ಫೇಸಿ ಕಾಯಿದೆ'')ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಕಾಯಿದೆ 2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 3ರ ಜೊತೆಗೆ ಓದಿಕೊಳ್ಳಬೇಕಾದ ಕಲಂ 13(12)ರಡಿ, ಪ್ರದತ್ತವಾದ ಅಧಿಕಾರಗಳಂತೆ ಕೆಳಕಂಡಂತೆ ನಮೂದಿಸಲಾದ ಸಂಬಂಧಿತ ದಿನಾಂಕಗಳಂದು ಡಿಮಾಂಡ್ ನೋಟೀಸ್‌ಗಳನ್ನು ಸಾಲಗಾರರಿಗೆ/ ಜಾಮೀನುದಾರರಿಗೆ ಅಡಮಾನದಾರರಿಗೆ ಜಾರಿ ಮಾಡಿ ನೋಟೀಸ್‌ಗಳಲ್ಲಿ ತಿಳಿಸಿದ ಬಾಕಿ ಸಾಲದ ಬಾಬ್ತು ಜೊತೆಗೆ ಮರುಪಾವತಿಯಾಗದ ದಿನಾಂಕದವರೆಗಿನ ಕರಾರಿನ ದರದಂತೆ ತದನಂತರದ ಬಡ್ಡಿ ಹಾಗೂ ಸಾಂದರ್ಭಿಕ ವೆಚ್ಚಗಳು, ಕಾಸ್ಟ್, ಚಾರ್ಜುಗಳು ಇತ್ಯಾದಿಗಳು ಸೇರಿದ ಬಾಕಿ ಸಾಲದ ಮೊತ್ತವನ್ನು, ನೋಟೀಸ್‌ಗಳನ್ನು ಸ್ವೀಕರಿಸಿದ 60 ದಿನಗಳೊಳಗಾಗಿ ಮರುಪಾವತಿ ಮಾಡಲು ಸೂಚಿಸಿದ್ದರು. ಇವರುಗಳಿಗೆ, ಕೊನೆಯದಾಗಿ ತಿಳಿದು ಬಂದ ಸಾಲಗಾರರ ವಿಳಾಸಗಳಿಗೆ ನೋಟೀಸ್‌ಗಳನ್ನು ಕಳುಹಿಸಲಾಗಿದ್ದು ಅವು ಹಾಗೆಯೇ ವಾಪಸ್ಸು ಬಂದಿದ್ದು, ಈ ಮೂಲಕ ಇವರುಗಳಿಗೆ ಸಾರ್ವಜನಿಕ ಸೂಚನೆಯನ್ನು ಪ್ರಕಟಿಸುವ ಮೂಲಕ ಮಾಹಿತಿ ನೀಡಲಾಗುತ್ತಿದೆ.

ಕ್ರ. ಸಂ.	ಸಾಲಗಾರರ ಹೆಸರು/ ವಿಳಾಸ ಮತ್ತು ಟ್ರಸ್ಟ್‌ನ ಹೆಸರು	ನೋಟೀಸ್‌ನ ದಿನಾಂಕ ಮತ್ತು ಎನ್‌ಪಿಎ	ಸಾಲ ಮತ್ತು ಬಾಕಿ ಮೊತ್ತ	ಭದ್ರತಾ ಆಸ್ತಿಯ ವಿವರ
5.	1. ಶ್ರೀಮತಿ ಅರುಣ ಯು ತಿಮ್ಮು, 2. ಶ್ರೀಮತಿ ಸವಿತಾ, 3. ಶ್ರೀಮತಿ ವಿಜಯಕುಮಾರಿ, ವಿಳಾಸ: ಇಟಗಲ್ಲಿ ಗ್ರಾಮ, ಪಂಚವಳ್ಳಿ ಅಂಚೆ, ಕಸಬಾ ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರ, ಕರ್ನಾಟಕ- 571105 ಮತ್ತು ಅಲ್ಲದೇ 1ಎ. ಶ್ರೀ ಅರುಣ, ಉರೂಫ್ ತಿಮ್ಮ, ಮನೆ ಸಂ. 162/200, ಯುನಿಕ್ಯು ಸಂ. 152200601500700274, ಬಕ್ಯಾ ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ- 571105.	ನೋಟೀಸ್ ದಿನಾಂಕ: 21ನೇ ಆಗಸ್ಟ್ 2025 ಎನ್‌ಪಿಎ ದಿನಾಂಕ: 04/07/2025.	ಸಾಲದ ಖಾತಾ ಸಂ. 0000091808-ಸಿ, (ಪಿಆರ್01605002) ಮತ್ತು 0000120864-ಸಿ (ಪಿಆರ್01657494). ಸಾಲದ ಮೊತ್ತ ರೂ. 1988497/- (ಹತ್ತೊಂಭತ್ತು ಲಕ್ಷದ ಎಂಭತ್ತೆಂಟು ಸಾವಿರದ ನಾಲ್ಕುನೂರ ತೊಂಭತ್ತೇಳು ರೂ. ಮಾತ್ರ) ರೂ. 1650000/- ಎ/ಸಿ ಸಂ. 0000091808-ಸಿ, (ಪಿಆರ್01605002) ಮತ್ತು ಮತ್ತು ರೂ. 338497/- ಎ/ಸಿ ಸಂ. 0000120864-ಸಿ (ಪಿಆರ್01657494). ಒಟ್ಟಾರೆ ಮೊತ್ತ ರೂ. 2111703/- (ಇಪ್ಪತ್ತೊಂದು ಲಕ್ಷದ ಹನ್ನೊಂದು ಸಾವಿರದ ಏಳುನೂರ ಮೂರು ರೂ. ಗಳು ಮಾತ್ರ) 11ನೇ ಆಗಸ್ಟ್ 2025 ರಂದು ಇದ್ದಂತೆ. ಪ್ಲಸ್ 12ನೇ ಆಗಸ್ಟ್ 2025 ರಿಂದ ಅನ್ವಯಿಸದ ಬಡ್ಡಿ ಸೇರಿದಂತೆ.	ಸಕಲ ಸಮಸ್ತವೂ ಸೇರಿದಂತೆ ಮನೆಯ ಆಸ್ತಿ 162/200 ಯುನಿಕ್ಯು ಸಂ. 152200601500700274, ಅಳತೆ- ಪೂರ್ವದಿಂದ ಪಶ್ಚಿಮಕ್ಕೆ- 15.24 ಮೀ ಮತ್ತು ಉತ್ತರದಿಂದ ದಕ್ಷಿಣಕ್ಕೆ- 7.62 ಮೀ. ಒಟ್ಟಾರೆ ಅಳತೆ- 116.13 ಚ.ಮೀ. ಕಟ್ಟಡ್ಕ 116ಯ13 ಚ.ಮೀ. ಬೇಕ್ಯಾ ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು, ಮೈಸೂರು ಜಿಲ್ಲೆ, ಕಮಲಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿ, ಸ್ಥಿರಾಸ್ತಿಯ ಚಕ್ಕುಬಂದಿ : ಪೂರ್ವಕ್ಕೆ: ಬಂಡಿದಾರಿ ರಸ್ತೆ, ಪಶ್ಚಿಮಕ್ಕೆ: ಪುಟ್ಟೇಗೌಡ ರವರ ಆಸ್ತಿ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸ್ವಯಂ ಭೂಮಿ.

ಮೇಲಿನಂತೆ ತಿಳಿಸಲಾದ ಸಂದರ್ಭಗಳಲ್ಲಿ ಸಾಲಗಾರರ, ಸಹ-ಸಾಲಗಾರರಿಗೆ ಸೂಚನೆ ನೀಡಿ ತಿಳಿಯಪಡಿಸಿದಂತೆ ಆಗಿರುವ ಸಾಲದ ಬಾಕಿ ಮೊತ್ತವನ್ನು ಜೊತೆಗೆ ತದನಂತರದ ಬಡ್ಡಿ ಮತ್ತು ಅನ್ವಯಿಸುವ ಚಾರ್ಜುಗಳೊಂದಿಗೆ ಬಾಕಿ ಸಾಲದ ಮೊತ್ತವನ್ನು ಈ ಸೂಚನೆ ಪ್ರಕಟವಾದ 60 ದಿನಗಳೊಳಗಾಗಿ ಪಾವತಿ ಮಾಡಬೇಕೆಂದು ತಿಳಿಯಪಡಿಸಲಾಗಿದೆ. ವಿಫಲರಾದಲ್ಲಿ, ಈ ನೋಟೀಸ್ ದಿನಾಂಕದಿಂದ 60 ದಿನಗಳು ಮುಗಿದ ಕೂಡಲೇ ಭದ್ರತಾ ಆಸ್ತಿಗಳ ವಿರುದ್ಧ ಸಾಲಗಾರರ ಮತ್ತು ಅಡಮಾನದಾರರ ಭದ್ರತಾ ಆಸ್ತಿಗಳನ್ನು ಕಲಂ 13(4)ರಡಿ ಸರ್ಫೇಸಿ ಕಾಯಿದೆಯಡಿ ಸ್ವಾಧೀನ ಪಡೆಯಲಿದ್ದಾರೆ ಮತ್ತು ತದನಂತರದ ಅನ್ವಯವಾಗುವ ನಿಯಮಗಳಂತೆ ಮುಂದಿನ ಕ್ರಮ ಜರುಗಿಸಲಾಗುವುದು. ದಯವಿಟ್ಟು ಸೂಚನೆ ನೀಡುವುದೇನೆಂದರೆ ಸರ್ಫೇಸಿ ಕಾಯಿದೆಯ ಕಲಂ 13(13) ರಡಿಯ ಕಟ್ಟಳೆಗಳಂತೆ ಯಾವುದೇ ಸಾಲಗಾರರು, ಮೇಲಿನಂತೆ ತಿಳಿಯಪಡಿಸಿದ ಹಾಗೂ ಡಿಮಾಂಡ್ ನೋಟೀಸಿನಲ್ಲಿ ಸೂಚಿಸಲಾದ ಅವರ ಭದ್ರತಾ ಆಸ್ತಿಗಳನ್ನು ಮಾರಾಟ, ಭೋಗ್ಯಾಧಾರ ಅಥವಾ ಇತರ ರೀತಿಯಲ್ಲಿ ಸೆಕ್ಯೂರ್ಡ್ ಕ್ರೆಡಿಟರ್ ರವರ ಮುಂಚಿತವಾದ ಲಿಖಿತ ಒಪ್ಪಿಗೆಯಿಲ್ಲದೆ ವರ್ಗಾವಣೆ ಮಾಡುವಂತಿಲ್ಲ.

ದಿನಾಂಕ: 29ನೇ ಸೆಪ್ಟೆಂಬರ್ 2025
ಸ್ಥಳ: ಕರ್ನಾಟಕ
ಸಹಿ/- ಅಧಿಕೃತ ಅಧಿಕಾರಿ
ಎಸ್‌ಬಿಎಫ್‌ಸಿ ಫೈನಾನ್ಸ್ ಲಿಮಿಟೆಡ್

ನಮನ ಭಗತ್ ಸಿಂಗ್ ಪುತ್ಥಳಿಗೆ ಪುಷ್ಪಾರ್ಚನೆ

ಶ್ರೀ ಭಗತ್ ಸಿಂಗ್ 118ನೇ ಜಯಂತಿ ಆಚರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಶ್ರೀ ಭಗತ್ ಸಿಂಗ್ ಅವರ 118ನೇ ಜಯಂತಿ ಕಾರ್ಯಕ್ರಮವನ್ನು ಅದ್ದೂರಿಯಾಗಿ ಸಾತಗಳ್ಳಿ ಬಿ ವಲಯದಲ್ಲಿರುವ ಭಗತ್ ಸಿಂಗ್ ವೃತ್ತದಲ್ಲಿ ಭಗತ್ ಸಿಂಗ್ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಆಚರಿಸಲಾಯಿತು.

ಬಡಾವಣೆಯ ನಿವಾಸಿ, ಮಾಜಿ ಸೈನಿಕ ವಿ. ಮಹೇಶ್ ಭಗತ್ ಸಿಂಗ್ ಬಗ್ಗೆ ಪರಿಚಯ ಮತ್ತು ಕ್ರಾಂತಿಕಾರಿ ಸ್ವಾತಂತ್ರ ಹೋರಾಟ ಹೇಗಿತ್ತು ಎಂಬುದನ್ನು ತಿಳಿಸಿದರು.

ಬಡಾವಣೆಯ ಅಧ್ಯಕ್ಷ ಚಲುವೇಗೌಡ ಮಾತನಾಡಿದರು. ನಾಗರೀಕರಾದ ಗಂಗಾಧರ್, ಶೇಖರ್, ಶ್ರೀರಾಮ್, ಕುಮಾರಸ್ವಾಮಿ, ಜಯಸ್ವಾಮಿ, ವೀರನಾರಿಯರಾದ ರಜಿನಿ ಸುಬ್ಬಯ್ಯ, ಮಾಜಿ ಸೈನಿಕರಾದ ಶಂಬು, ಬಡಾವಣೆಯ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಸುಮಾರು 40-50 ದೇಶಾಭಿಮಾನಿಗಳು ಹಾಜರಾಗಿ ಭಾರತ್ ಮಾತಾಕೀ ಜೈ, ಇಂಕಿಲಾಬ್ ಜಿಂದಾಬಾದ್ ಎಂಬ ಘೋಷಣೆ ಕೂಗಿದರು.